**ಸೆಕ್ಷನ್ 4 (ಬಿ) (ತ್ರು)– ಸಾರ್ವಜನಿಕರಿಗ ಲಭ್ಯವಿರುವ ಪರಿಹಾರೋಪಾಯಗಳು**

ಮಂಡಳಿಯು ತನ್ನ ಗ್ರಾಹಕರಿಂದ ಬರುವ ನೀರಿನ ಬಿಲ್ಲುಗಳ ಅಹವಾಲುಗಳನ್ನು ಬಗೆಹರಿಸುವ ಸಲುವಾಗಿ ಪ್ರತಿ ಉಪ ವಿಭಾಗದಲ್ಲಿಯೂ (20 ಉಪ ವಿಭಾಗಗಳು) ನೀರಿನ ಅದಾಲತ್‌ಗಳನ್ನು ಏರ್ಪಡಿಸುತ್ತಿರುತ್ತದೆ. ಸದರಿ ಅದಾಲತ್‌ನಲ್ಲಿ ನಾಲ್ಕು ಜನ ಸದಸ್ಯರಿರುತ್ತಾರೆ. ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ಅಧ್ಯಕ್ಷರಾಗಿದ್ದು, ಇಬ್ಬರು ಸಹಾಯಕ ನಿರ್ವಾಹಕ ಅಭಿಯಂತರರುಗಳು ಮತ್ತು ಲೆಕ್ಕಾಧಿಕಾರಿ (ಕಂದಾಯ) ಕಛೇರಿಯಿಂದ ಒಬ್ಬ ಲೆಕ್ಕ ಅಧೀಕ್ಷಕರು ಸದಸ್ಯರಾಗಿರುತ್ತಾರೆ.